ಅವರು ಪಳಗಿದ್ದರು. ಪರಿಪೂರ್ಣ ಅಭಿನಯ, ಅರ್ಥಪೂರ್ಣ ಹಾಡುಗಾರಿಕೆ ಸುಭದ್ರಮ್ಮನವರ ಯಶಸ್ಸಿಗೆ ಮುಖ್ಯ ಕಾರಣಗಳು. ಪಾತ್ರಗಳಲ್ಲಿ ತನ್ಮಯರಾಗಿ ಬಿಡುವುದು ಅವರ ಇನ್ನೊಂದು ಗುಣ. ಇವೇ ಅವರಿಗೆ ರಂಗಭೂಮಿಯಲ್ಲಿ ಕಾಯಂ ಸ್ಥಾನ ಗಳಿಸಿಕೊಟ್ಟ ಅಂಶಗಳಾಗಿದ್ದವು.

'ಹರಿಶ್ಚಂದ್ರ', 'ಬಾಣಾಸುರ', 'ಉಷಾ ಸ್ವಯಂವರ', 'ಟಿಪ್ಪುಸುಲ್ತಾನ್' ಮೊದಲಾದ ನಾಟಕಗಳಲ್ಲೂ ಅಪ್ರತಿಮ ಅಭಿನಯವಿತ್ತ ಸುಭದ್ರಮ್ಮ ಪ್ರೇಕ್ಷಕರ ಮನದಾಳ ಪ್ರವೇಶಿಸಿದ ಪಾತ್ರಗಳೆಂದರೆ 'ಕಲಾವತಿ' ಹಾಗೂ 'ಹೇಮರೆಡ್ಡಿ ಮಲ್ಲಮ್ಮ' ಪಾತ್ರಗಳು.

ಎಲ್ಲ ಬಗೆಯ ಪಾತ್ರಗಳನ್ನು ನಿರ್ವಹಿಸುವ ಛಾತಿ ಇದ್ದ ಕಲಾವಿದರು ಆಗ ಅಪರೂಪ. ಅದರಲ್ಲೂ ಮಹಿಳೆಯರಲ್ಲಿ ಇದು ಇನ್ನೂ ಅಪರೂಪ. ಇಂತಹ ಹೊತ್ತಲ್ಲಿ ಸುಭದ್ರಮ್ಮ 'ಕಲಾ ವೈಭವ' ನಾಟ್ಯ ಸಂಘದಲ್ಲಿ ಆರೆಂಟು ವರ್ಷಗಳ ಕಾಲ ಬಣ್ಣ ಹಚ್ಚಿ ವೀಕ್ಷಕರನ್ನು ತಣಿಸಿದರು. ಪೌರಾಣಿಕ, ಐತಿಹಾಸಿಕ, ಜಾನಪದ ಈ ಎಲ್ಲಾ ಪ್ರಕಾರದ ನಾಟಕಗಳಲ್ಲಿ ಪಾತ್ರ ನಿರ್ವಹಿಸಿದ ಸುಭದ್ರಮ್ಮನವರು ಮುಂದೆ ಸೇರಿದ್ದು 'ಹಿರಣ್ಣಯ್ಯ ಮಿತ್ರ ಮಂಡಲಿ'ಯನ್ನು ಮಾಸ್ಟರ್ ಹಿರಣ್ಣಯ್ಯನವರ 'ಲಂಚಾವತಾರ'ವಂತೂ ಹಲವು ಜನರಿಗೆ ನಿದ್ದೆಗೆಡಿಸುತ್ತಿತ್ತು. ಈ ನಾಟಕದಲ್ಲಿ ಕಾರಕೂನನ ಹೆಂಡತಿ ಸೀತಾ ಪಾತ್ರದಲ್ಲಿ ಬೆರತುಹೋಗುವುದು ಅವರಿಗೆ ಸಾಮಾನ್ಯವಾಗಿತ್ತು. ಇಲ್ಲೂ ಹಾಗೇ ಆಗಿತ್ತು. ಒಂದೆಡೆ ಮಾ. ಹಿರಣ್ಣಯ್ಯ ನಗೆಚಾಟಿ ಬೀಸುತ್ತಿದ್ದರೆ ಸುಭದ್ರಮ್ಮ ಪರಿವರ್ತನೆಯ ಗಾಳಿ ಬೀಸುವ ವಾತಾವರಣವನ್ನು ರಂಗದ ಮೇಲೆ ಸೃಷ್ಟಿಸುತ್ತಿದ್ದರು. ಇದಕ್ಕೆ ಪುಟವಿಟ್ಟಂತೆ ಯೋಗಾನರಸಿಂಹ ಅಕ್ಕಮಹಾದೇವಿಯ ವಚನವನ್ನು ಅವರಿಂದ ಹಾಡಿಸಿ ರಂಗಕ್ಕೆ ಗಾಂಭೀರ್ಯವನ್ನು ತರುತ್ತಿದ್ದರು. 'ದೇವದಾಸಿ'ಯಲ್ಲಿ 'ಮಣಿ ಮಂಜರಿ', 'ಹೆಣ್ ಹರಾಜ್' ನಾಟಕದಲ್ಲಿ 'ಚೆನ್ನಿ' ಪಾತ್ರಗಳಿಗೆ ಸುಭದ್ರಮ್ಮ ತಮ್ಮ ಸ್ಪರ್ಶ ಕೊಟ್ಟರಲ್ಲದೆ ಪ್ರೇಕ್ಷಕರ ಒಲವು ಗಳಿಸಿದ್ದರು. ಮಿತ್ರ ಮಂಡಲಿಯ ನಾಟಕಗಳಲ್ಲಿ ಅವರ ಹಾಡುಗಾರಿಕೆ ಹೆಸರು ತಂದುಕೊಟ್ಟಿತು. ವಿಶೇಷವಾಗಿ ಅಕ್ಕಮಹಾದೇವಿ ವಚನಗಳು ಪ್ರೇಕ್ಷಕರ ಮನಮುಟ್ಟಿದವು.

ನಂತರ ಮನ್ಸೂರ್ ದಂಪತಿ ಬನಹಟ್ಟಿ ನಾಟಕ ಕಂಪನಿ ಸೇರಿದರೂ ಬಹಳ ಕಾಲ ಅಲ್ಲಿ ಉಳಿಯಲಿಲ್ಲ. ಐದಾರು ನಾಟಕ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದ ಇವರಿಬ್ಬರೂ ಕೊನೆಗೆ ಬಳ್ಳಾರಿಯಲ್ಲಿ ನೆಲೆ ನಿಂತರು. ನಾಟಕ ಕಂಪನಿಗೆ ಸೇರುವುದಿಲ್ಲವೆಂಬ ನಿರ್ಧಾರ ತೆಗೆದುಕೊಂಡರೂ ನಾಟಕಗಳಿಗೆ ಇವರನ್ನು ಆಹ್ವಾನಿಸುವುದು ನಿಲ್ಲಲಿಲ್ಲ.

ಶಾಸ್ತ್ರಬದ್ಧವಾಗಿ ಸಂಗೀತವನ್ನು ಅಭ್ಯಾಸ ಮಾಡಿರುವ ಸುಭದ್ರಮ್ಮ ರಂಗಭೂಮಿಯಲ್ಲಿ ನಾಯಕಿ–ಗಾಯಕಿಯಾಗಿ ಖ್ಯಾತಿ ಪಡೆದರಲ್ಲದೆ ರಂಗ ಗೀತೆಗಳನ್ನು ಹಾಡುವುದರಲ್ಲಿ ಹೆಸರು ಮಾಡಿದರು. ದಾಸರ ಪದ, ಶರಣರ ವಚನ, ಜನಪದ ಹಾಡು ಹೀಗೆ ಹಲವು ಪ್ರಕಾರಗಳಲ್ಲಿ ನುರಿತವರಾದ ಅವರು ಸ್ವರ ಸಂಯೋಜನೆ ಮಾಡುವುದರಲ್ಲೂ ನಿಪುಣರು.

ಕಂಪನಿ ನಾಟಕಗಳಲ್ಲಿ ಅಭಿನಯಿಸುವುದನ್ನು ಕಡಿಮೆ ಮಾಡಿದ ಅವರಿಗೆ ಗ್ರಾಮೀಣ ನಾಟಕಗಳಲ್ಲಿ ಪಾತ್ರ ವಹಿಸುವಂತೆ ಬರುವ ಆಹ್ವಾನಗಳು ಹೆಚ್ಚಿದವು. ಇದರೊಂದಿಗೆ ರಂಗ ತರಬೇತಿಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ಸಂಗೀತ ಕಚೇರಿಗಳನ್ನು ನಡೆಸಿಕೊಡುವುದರೊಂದಿಗೆ ಸಂಗೀತ ಪ್ರೇಮಿಗಳ ಮನಸ್ಸು ಮುದಗೊಳಿಸುತ್ತಿದ್ದಾರೆ. ಅಂದಾಜು 200ಕ್ಕೂ ಹೆಚ್ಚಿನ ನಾಟಕಗಳಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಪ್ರದರ್ಶನಗಳಲ್ಲಿ ಪಾಲ್ಗೊಂಡ ಹಿರಿಮೆ ಸುಭದ್ರಮ್ಮ ಅವರದು. 'ಗುಬ್ಬಿ ವೀರಣ್ಣ ಪ್ರಶಸ್ತಿ', ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ನಾಡೋಜ ಗೌರವ ಸೇರಿದಂತೆ ಹಲವು ಗೌರವ ಪುರಸ್ಕಾರಗಳು ಅವರಿಗೆ ಸಂದಿವೆ.

⌘